# ನೆಫ್ರೋ-ಯುರಾಲಜಿ ಸಂಸ್ಥೆ

ವಿಕ್ಟೋರಿಯಾ ಆಸ್ಪತ್ರೆ ಆವರಣ, ಬೆಂಗಳೂರು - 560 002.

ನಿರ್ದೇಶಕರ ಕಚೇರಿ,
ನೆಫ್ರೋ-ಯುರಾಲಜಿ ಸಂಸ್ಥೆ,
ವಿಕ್ಟೋರಿಯಾ ಆಸ್ಪತ್ರೆ ಆವರಣ, ಬೆಂಗಳೂರು.

ಸಂಖ್ಯೆ: ನೆಯುಸಂ/ಕಟ್ಟಡ/04/2014-15

ದಿನಾಂಕ: 20.11.2014

## ಟೆಂಡರ್ ಪ್ರಕಟಣೆ

ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆ ಆವರಣದಲ್ಲಿರುವ ನೆಫ್ರೋ-ಯುರಾಲಜಿ ಸಂಸ್ಥೆಯು ಈ ಕೆಳಕಂಡ ಕೆಲಸಕ್ಕಾಗಿ ನೋಂದಾಯಿಸಿಕೊಂಡಿರುವ ಲೋಕೋಪಯೋಗಿ ಇಲಾಖೆಯ ಅಧಿಕೃತ ಗುತ್ತಿಗೆದಾರರಿಂದ ಟೆಂಡರುಗಳನ್ನು ಸ್ವೀಕರಿಸಲು ಕಡೆಯ ದಿನಾಂಕವನ್ನು ಕಾಲಂ ನಂ 10 ರಂತೆ ನಿಗದಿಪಡಿಸಿ ಸಂಜೆ 4.00 ಘಂಟೆಯೊಳಗೆ ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಸ್ವೀಕರಿಸಲಾಗುವುದು. ಸಾಧ್ಯವಾದಲ್ಲಿ ಅಂದೇ ಸದರಿ ಟೆಂಡರುಗಳನ್ನು ಹಾಜರುರುವ ಗುತ್ತಿಗೆದಾರರ ಮುಂದೆ ತೆರೆಯಲಾಗುವುದು. ಸಾಧ್ಯವಾಗದಿದ್ದಲ್ಲಿ ಮುಂದಿನ ದಿನ ಅಂದರೆ ರಜಾ ದಿನವನ್ನು ಬಿಟ್ಟು ತೆರೆಯಲಾಗುವುದು. ಕೆಲಸಕ್ಕೆ ಸಂಬಂಧಪಟ್ಟ ದಾಖಲೆ ಕಡತಗಳನ್ನು ಹಾಗೂ ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ನೋಡಬಹುದು.

ಟೆಂಡರ್‌ಗೆ ಸಂಬಂಧಪಟ್ಟ ಡಾಕ್ಯೂಮೆಂಟ್ಸ್‌ಗಳನ್ನು ಪಡೆಯಲು ಸದರಿ ಕಛೇರಿಯಲ್ಲಿ ಕಾಲಂ 8 ರಲ್ಲಿ ನಮೂದಿಸಿರುವ ದಿನಾಂಕದಂದು ಬೆಳಿಗ್ಗೆ 9.00 ಘಂಟೆಯಿಂದ ಸಂಜೆ 4.00 ಘಂಟೆಯೊಳಗೆ (ಅಂದರೆ ಮಧ್ಯಾಹ್ನ 1.00 ರಿಂದ 2.00ರವರೆಗೆ ಬಿಟ್ಟು) ಅರ್ಜಿಯನ್ನು ಸಲ್ಲಿಸಿ ಅದರ ಜೊತೆಯಲ್ಲಿ ಟೆಂಡರ್ ಡಾಕ್ಯೂಮೆಂಟ್ಸ್‌ಗಳ ಹಣವನ್ನು ಪಾವತಿ ಮಾಡಬೇಕು. ಟೆಂಡರ್ ಡಾಕ್ಯೂಮೆಂಟ್ಸ್‌ಗಳನ್ನು ಕಾಲಂ ನಂ. 9ರಲ್ಲಿ ನಮೂದಿಸಿರುವ ದಿನಾಂಕದಂದು ಕೊಡಲಾಗುವುದು ಹಾಗೂ ಟೆಂಡರ್ ಡಾಕ್ಯೂಮೆಂಟ್ಸ್‌ಗಳಿಗೆ ಅರ್ಜಿ ಸಲ್ಲಿಸುವಾಗ ಅದರ ಜೊತೆಯಲ್ಲಿ ತಾವು ಹಿಂದೆ ಮಾಡಿದ ಕೆಲಸಗಳು ಮತ್ತು ಈಗ ನಡೆಯುತ್ತಿರುವ ಕೆಲಸಗಳ ಮೊಬಲಗು ಮತ್ತು ಇತರೆ ವಿವರಗಳನ್ನು ಲಗತ್ತಿಸುವುದು. ಸದರಿ ಕೆಲಸವನ್ನು ಶೀಘ್ರವಾಗಿ ಮುಗಿಸಲು ಬೇಕಾಗುವ ಆಧುನಿಕ ಯಂತ್ರೋಪಕರಣಗಳನ್ನು ಸ್ವಂತವಾಗಿ ಹೊಂದಿರುವ ವಿವರಗಳನ್ನು ಸಹ ಲಗತ್ತಿಸುವುದು. ಸದರಿ ಕೆಲಸಕ್ಕೆ ತಾಂತ್ರಿಕ ಸಿಬ್ಬಂದಿಯನ್ನು ಹೊಂದಿರುವ ವಿವರಗಳನ್ನು ಸಹ ಲಗತ್ತಿಸುವುದು. ಕಾಮಗಾರಿಗೆ ಬೇಕಾಗುವ ಸಿಮೆಂಟ್ ಸ್ಟೀಲ್‌ಗಳನ್ನು ಗುತ್ತಿಗೆದಾರರೇ ಸ್ವಂತವಾಗಿ ಒದಗಿಸಿಕೊಳ್ಳಬೇಕು.

| ಕ್ರ ಸಂ | ಕಾಮಗಾರಿಯ ಹೆಸರು | ಕೆಲಸಕ್ಕೆ ಇಟ್ಟಿರುವ ಮೊಬಲಗು ರೂ. | ಇ.ಎಮ್.ಡಿ. (ರೂ.) | ಟೆಂಡರ್ ಡಾಕ್ಯೂಮೆಂಟ್ಸ್ ಹಣ (ರೂ.) | ಗುತ್ತಿಗೆದಾರರ ದರ್ಜೆ | ಕೆಲಸ ಮುಗಿಸಲು ಕಾಲಾವಕಾಶ | ಟೆಂಡರ್ ಡಾಕ್ಯೂಮೆಂಟ್ಸ್‌ಗಳಿಗೆ ಅರ್ಜಿಯನ್ನು ಅದಕ್ಕೆ ತಕ್ಕಂತೆ ಹಣ ಸ್ವೀಕರಿಸುವ ದಿನಾಂಕ (4.00 ಘಂಟೆಯೊಳಗೆ) | ಟೆಂಡರ್ ಡಾಕ್ಯೂಮೆಂಟ್ಸ್‌ಗಳನ್ನು ಗುತ್ತಿಗೆದಾರರಿಗೆ ನೀಡುವ ಕೊನೆಯ ದಿನಾಂಕ (4.00 ಘಂಟೆಯೊಳಗೆ) | ಟೆಂಡರ್‌ಗಳನ್ನು ಸ್ವೀಕರುಸುವ ಕೊನೆಯ ದಿನಾಂಕ (4.00 ಘಂಟೆಯೊಳಗೆ) | ಟೆಂಡರ್ ಕರೆದಿರುವುದು |
|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 |
| 1. | ಬೆಂಗಳೂರಿನ ನೆಫ್ರೋ-ಯುರಾಲಜಿ ಸಂಸ್ಥೆಗೆ ಚೈನ್ ಲಿಂಕ್ ಫೆನ್ಸಿಂಗ್ ಒದಗಿಸುವ ಬಗ್ಗೆ | 2,94,500.00 | 5,000.00 | 400 + ತೆರಿಗೆಗಳು (13.5%) | 2ನೇ ದರ್ಜೆ ಮತ್ತು ಮೇಲ್ಪಟ್ಟು | 15 ದಿನ | 27.11.2014 | 02.12.2014 | 05.12.2014 | ಮೊದಲನೆ ಕರೆ |

ಟಿಪ್ಪಣಿ :

1. ಇ.ಎಮ್.ಡಿಯನ್ನು ಡಿಮ್ಯಾಂಡ್ ಡೆಪಾಸಿಟ್ ಸರ್ಟಿಫಿಕೇಟ್, ನ್ಯಾಷನಲ್ ಸೇವಿಂಗ್ ಸರ್ಟಿಫಿಕೇಟ್ ಕಡ್ಡಾಯವಾಗಿ ಪತ್ರೆಯಿಟ್ಟು (ಬ್ಯಾಂಕ್ ಗ್ಯಾರಂಟಿ) ಇತ್ಯಾಧಿಗಳನ್ನು ನಿರ್ದೇಶಕರು, ನೆಫ್ರೋ-ಯುರಾಲಜಿ ಸಂಸ್ಥೆ, ಬೆಂಗಳೂರು, ಇವರ ಹೆಸರಿನಲ್ಲಿ ಪತ್ರೆಯಿಟ್ಟು ಟೆಂಡರ್ ಜೊತೆಯಲ್ಲಿ ಸ್ವೀಕರಿಸಲಾಗುವುದು ಯಾವುದೇ ಕಾರಣಕ್ಕೂ ಕರ್ನಾಟಕ ಕಂಟ್ರ್ಯಾಕ್ಟರ್ಸ್ ಕ್ರೆಡಿಟ್ ಕೊ-ಆಪರೇಟಿವ್ ಅವರು ನೀಡುವ ಡೆಪಾಸಿಟ್ ಸರ್ಟಿಫಿಕೇಟ್‌ಗಳನ್ನು ಸ್ವೀಕೃತಿ ಮಾಡವುದಿಲ್ಲ.
2. ಯಾವ ಕಾರಣವನ್ನು ನೀಡದೇ ಅಥವಾ ಎಲ್ಲಾ ಟೆಂಡರ್‌ಗಳನ್ನು ಸ್ವೀಕರಿಸುವ ಮತ್ತು ತಿರಸ್ಕರಿಸುವ ಅಧಿಕಾರವನ್ನು ಆಧರಿಸಿಕೊಳ್ಳಲಾಗಿದೆ.
3. ಯಾವುದೇ ನಿಬಂಧನೆಗೊಳಗೊಂಡ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು.
4. ಟೆಂಡರ್ ಕರೆಯು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆಧ್ಯಾದೇಶ 2000ರಲ್ಲಿನ ಮಾರ್ಗಸೂಚಿಗಳಿಗೆ ಒಳಪಟ್ಟಿರುತ್ತದೆ.
5. ಸರ್ಕಾರದ ಆದೇಶ ಸಂಖ್ಯೆ : ಎಲ್‌ಡಿ:300:ಎಲ್‌ಇಟಿ2006ದಿ: 18-1-07ರ ಅನುಗುಣವಾಗಿ ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಗೆ ಶೇಕಡ 1ರಷ್ಟು ಕಾರ್ಮಿಕ ಕಲ್ಯಾಣ ಸುಂಕವನ್ನು ಕಡಿತಗೊಳಿಸಲಾಗುವುದು.

21/11/14

ನಿರ್ದೇಶಕರು,
ನೆಫ್ರೋ-ಯುರಾಲಜಿ ಸಂಸ್ಥೆ,
ವಿಕ್ಟೋರಿಯಾ ಆಸ್ಪತ್ರೆ ಆವರಣ.
ಬೆಂಗಳೂರು.

ಪ್ರತಿ:

1. ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ (ವೈದ್ಯಕೀಯ ಶಿಕ್ಷಣ) ಇಲಾಖೆ, ವಿಕಾಸಸೌಧ, ಬೆಂಗಳೂರು
2. ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸಸೌಧ, ಬೆಂಗಳೂರು
3. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಆನಂದರಾವ್ ವೃತ್ತ, ಬೆಂಗಳೂರು
4. ಕಾರ್ಯಪಾಲಕ ಇಂಜಿನಿಯರ್ ನಂ, 2ನೇ ಕಟ್ಟಡಗಳ ವಿಭಾಗ, ಬೆಂಗಳೂರು.
5. ಕಾರ್ಯಪಾಲಕ ಇಂಜಿನಿಯರ್ ನಂ, 9ನೇ ಕಟ್ಟಡಗಳ ಉಪವಿಭಾಗ, ವಿಕ್ಟೋರಿಯಾ ಆಸ್ಪತ್ರೆ ಆವರಣ, ಬೆಂಗಳೂರು.
6. ಲೆಕ್ಕಪತ್ರ ವಿಭಾಗ, ನೆಯುಸಂ, ಬೆಂಗಳೂರು.
7. ಕಛೇರಿ ಸೂಚನಫಲಕಕ್ಕೆ
8. ಕರಡು ಪ್ರತಿ